ಸಂವೇದನಾಶೀಲತೆ ಉಂಟು ಮಾಡಲು ಕಥೆಗಳ ಬಳಕೆ | ಪರಿ (PARI) ಅನುಭವ

ಪ್ರೀತಿ ಡೇವಿಡ್

ಒಡಿಶಾದಲ್ಲಿ ಬೇಸಿಗೆ ತಾಪಮಾನವು ಏರಿಕೆಯಾಗಿ, ಹುಲ್ಲುಗಾವಲುಗಳಲ್ಲಿ ಮೇವು ವಿರಳವಾದಾಗ ಎಮ್ಮೆ ಸಾಕುವವರು ತಮ್ಮ ಪ್ರಾಣಿಗಳಿಗೆ ಆಹಾರ ಹುಡುಕಿಕೊಂಡು ದೂರ ಪ್ರದೇಶಗಳಿಗೆ ಅಲೆಯಬೇಕಾಗುತ್ತದೆ. ಮೇವಿಗಾಗಿ ನದಿಯಲ್ಲಿ ಈಜಿಕೊಂಡು ಇನ್ನೊಂದು ದಡಕ್ಕೆ ಸಾಗುವ ಎಮ್ಮೆಗಳ ಹಿಂಡು ಹಾಗು ಈ ಗೋವಳರು ಪುಟ್ಟ ಕರುಗಳನ್ನು ಕಂಕುಳಲ್ಲಿ ಎತ್ತಿಕೊಂಡು ಹೇಗೆ ಅದ್ಭುತವಾಗಿ ತಮ್ಮ ಪ್ರಾಣಿಗಳನ್ನು ಆರೈಕೆ ಮಾಡುತ್ತಾರೆ ಎಂಬ ಚಿತ್ರಗಳ ಮೂಲಕ ನಗರವೊಂದರ ಪ್ರಾಥಮಿಕ ಶಾಲೆಯಲ್ಲಿ ಗ್ರಾಮೀಣ ಭಾರತದ ಕುರಿತು ಮಾತನಾಡಲು ಆರಂಭಿಸುತ್ತೇವೆ. ನಿರೀಕ್ಷೆಯಂತೆ, ಎಮ್ಮೆಗಳ ಈ ವಲಸೆಯ ಕಥೆ ಹಾಗು ಆಳ ನೀರಿನಲ್ಲಿ ಸಾಗುತ್ತಿದ್ದಂತೆ ಕರುವು ತನ್ನ ತಾಯಿಯನ್ನು ಕರೆಯುವ ಬಗೆಯು, ತಕ್ಷಣವೇ ಕರುವಿನ ಜೊತೆ ಗುರುತಿಸಿಕೊಳ್ಳುವ ಮಕ್ಕಳ ಮನಸ್ಸು ಮುಟ್ಟುತ್ತದೆ. ಭಾರತದಲ್ಲಿ ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಹೇಗೆ ತಮ್ಮ ಪ್ರಾಣಿಗಳನ್ನು (ಈ ಪ್ರಾಣಿಗಳ ಹಾಲನ್ನು ಅವರು ಬೆಳಗ್ಗೆ ಸೇವಿಸಿರಬಹುದು) ಆರೈಕೆ ಮಾಡುತ್ತಾರೆ ಎಂಬುದರ ಬಗ್ಗೆ ಅವರ ಗಮನ ಸೆಳೆಯಲು ನಾವು ಈ ಕಥೆಯನ್ನು (ಒಡಿಶಾದಲ್ಲಿ ವಲಸೆಗಾಗಿ ಈಜುವುದು) ಬಳಸುತ್ತೇವೆ. ಈ ಕಲಿಕೆಯು ಎಲ್ಲಾ ಸರಹದ್ದುಗಳನ್ನು ಮೀರಿ ಮುಂದುವರೆಯುತ್ತದೆ.

ಕಲಿಕೆಯ ಸಾಧನವಾಗಿ ಪರಿ (PARI) ಬೇಸಿಗೆಯಲ್ಲಿ ಆಹಾರ ಮತ್ತು ಮೇವು ಪಡೆಯುವುದು ಕಷ್ಟವಾದಾಗ ಎಲ್ಲಾ ರೈತರು ತಮ್ಮ ಪ್ರಾಣಿಗಳನ್ನು ಕರೆದೊಯ್ಯುವ ಜಾನುವಾರು ಆಶ್ರಯತಾಣ ಯಾವುದು ಎಂಬುದು ನಿಮಗೆ ತಿಳಿದಿದೆಯೇ? ಅಥವಾ ಮಹಾರಾಷ್ಟ್ರದ ಯವತ್ಮಾಲ್ ಎಂಬಲ್ಲಿ ಕಾಡಿನಲ್ಲಿ ಮೇವಿಗಾಗಿ ಪ್ರಾಣಿಗಳನ್ನು ಕೊಂಡೊಯ್ಯುವಾಗ ಹುಲಿಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ದೇಹ ರಕ್ಷಕ ಉಪಕರಣವನ್ನು ವಿನ್ಯಾಸ-ಗೊಳಿಸಿದ ಗೋವಳನೊಬ್ಬನ ಕುರಿತು ನಿಮಗೆ ತಿಳಿದಿದೆಯೇ? ಈ ಕಥೆಗಳು, ಇತರ ಕಲಿಕಾ ಫಲಿತಾಂಶಗಳ ಜೊತೆಗೆ, ಪ್ರಾಣಿಗಳ ಕುರಿತು ಕಾಳಜಿ ತೋರುವಲ್ಲಿ ಪರಿಣಾಮಕಾರಿ ಪಾಠವಾಗಿ ರೂಪುಗೊಳ್ಳುತ್ತವೆ. ಇವು ಮಕ್ಕಳ ಕಲ್ಪನಾ ಶಕ್ತಿಯನ್ನು ವೃದ್ಧಿಸುತ್ತವೆ ಮತ್ತು ಸೃಜನಾತ್ಮಕವಾಗಿ ಚಿಂತಿಸಲು ಅವರಿಗೆ ಅನುವು ಮಾಡಿಕೊಡುತ್ತವೆ. ಸೂಕ್ಷ್ಮವಾಗಿ ಪರಿಶೀಲಿಸಲು, ಗ್ರಹಿಸಲು ಮತ್ತು ಅನುಭೂತಿ ವ್ಯಕ್ತಪಡಿಸಲು ಇತರರ ಹೆಜ್ಜೆಜಾಡಿನಲ್ಲಿ ಸಾಗುವುದಕ್ಕೆ ಇದು ಅವಕಾಶ ಕಲ್ಪಿಸಿಕೊಡುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಕರು, ಹನ್ನೆರಡು ಭಾರತೀಯ ಭಾಷೆಗಳಲ್ಲಿ ಲಭ್ಯವಿರುವ ಕಥೆಗಳು, ಚಿತ್ರಗಳು ಮತ್ತು ಚಲನಚಿತ್ರಗಳನ್ನು ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾ (People's Archive of Rural India -PARI) ವೆಬ್‌ತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಅಂತರ್ಜಾಲ ನಿಯತಕಾಲಿಕವು ಉಚಿತವಾಗಿದ್ದು, ಪಡೆಯುವ ವಿಧಾನವೂ ಸರಳವಾಗಿದೆ. ಕೃಷಿ, ಬೇಸಾಯ, ವಲಸೆ, ಸಮುದಾಯಗಳು, ಕರಕುಶಲ ಕಲೆಗಳು, ಆದಿವಾಸಿಗಳು ಮೊದಲಾದ ಗ್ರಾಮೀಣ ವಿಚಾರಗಳನ್ನು ಇದು ಒಳಗೊಂಡಿರುತ್ತದೆ. ಈ ಕಥೆಗಳು, ನಮ್ಮ ಕಾಲದ ಅನೇಕ ಸಮಸ್ಯೆಗಳ ಕುರಿತು ವಿದ್ಯಾರ್ಥಿಗಳಿಗೆ (ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದ ತನಕ) ಮಾಹಿತಿ ನೀಡುತ್ತವೆ, ಸಂವೇದನೆಯನ್ನು ರೂಪಿಸುತ್ತವೆ ಹಾಗು ಕಲಿಸುತ್ತವೆ. ದೇಶದ ಅತೀ ಹೆಚ್ಚು ಭಾಗವನ್ನು ಒಳಗೊಂಡಿರುವ ಗ್ರಾಮೀಣ ಭಾರತದ ಕುರಿತು ನಮ್ಮ ಪಠ್ಯಪುಸ್ತಕಗಳಲ್ಲಿ ಸಾಕಷ್ಟು ಪ್ರಮಾಣದ ವಿಷಯಗಳ ಕೊರತೆಯಿರುವುದಾಗಿ ನಾವು ಭಾವಿಸುತ್ತೇವೆ. ಗ್ರಾಮೀಣ ಭಾರತದ ಬದುಕು ಮತ್ತು ಜೀವನಾಧಾರದ ಕುರಿತು ವಿದ್ಯಾರ್ಥಿಗಳಿಗೆ ಸಾಕಷ್ಟು ವಿಚಾರಗಳು ತಿಳಿದಿಲ್ಲ. ಅವರ ಮನೆಗಳು, ಉದ್ಯೋಗ, ಅವರು ನೆಚ್ಚಿಕೊಂಡಿರುವ ಕಾಡು, ಅವರು ಬೆಳೆಸುವ ಬೆಳೆಗಳು, ಸೃಷ್ಟಿಸುವ ಕರಕುಶಲ ವಸ್ತುಗಳು, ಅವರ ಹಾಡುಗಳು ಮತ್ತು ಐತಿಹ್ಯಗಳು ಇನ್ನಿತರ ವಿಷಯಗಳ ಕುರಿತು ವಿದ್ಯಾರ್ಥಿಗಳು ಸಾಕಷ್ಟು ತಿಳಿದುಕೊಂಡಿರುವುದಿಲ್ಲ.

ಗ್ರಾಮೀಣ ಭಾರತದ ತೀರಾ ಒಳಪ್ರದೇಶದ ನೈಜ ಕಥೆಗಳನ್ನು ಬಳಸಿದರೆ, ನಮ್ಮನ್ನು ಅನೇಕ ರೀತಿಗಳಲ್ಲಿ ಸಂಪರ್ಕಿಸಿರುವ ಪ್ರಪಂಚವನ್ನು ಕೇಳಲು ಮತ್ತು ನೋಡಲು ಅವಕಾಶವೊಂದು ಸೃಷ್ಟಿಯಾಗುತ್ತದೆ. ಶಿಕ್ಷಕರಾಗಿ ನಾವು ಮಕ್ಕಳಲ್ಲಿ ಯಾವ ಮೌಲ್ಯಗಳನ್ನು ಬಿತ್ತಲು ಇಚ್ಛಿಸುತ್ತೇವೆ? ಗೌರವ ಮತ್ತು ತಾದಾತ್ಮ್ಯವನ್ನು ರೂಪಿಸಲು ನಾವು ಅವರಿಗೆ ಸಾಧನಗಳನ್ನು ನೀಡಬಹುದೆ? ಅತ್ಯಂತ ಎಳೆಯ ಮಕ್ಕಳಲ್ಲಿಯೂ ಮಾನವೀಯತೆ-ಯನ್ನು ರೂಪಿಸುವುದು ಅತ್ಯಗತ್ಯ. ಪಠ್ಯ ಯೋಜನೆಗಳು ಮತ್ತು ಬೋಧನಾ ಘಟಕಗಳು ಸಾಮಾನ್ಯವಾಗಿ ಶೈಕ್ಷಣಿಕ ಕಲಿಕೆಯ ಮೇಲೆ ಗಮನಹರಿಸುತ್ತವೆ. ಆದರೆ ಒಬ್ಬ ನಾಗರಿಕನ ಸತ್ತ್ವವನ್ನು ನಿರ್ಣಯಿಸುವಲ್ಲಿ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಪ್ರಗತಿಯು ಪ್ರಮುಖ ಪಾತ್ರ ವಹಿಸುತ್ತದೆ. ಹಾಗಾಗಿ, ಪ್ರಾಣಿಗಳನ್ನು ತಮ್ಮ ಮಕ್ಕಳಂತೆಯೇ ನೋಡಿಕೊಳ್ಳುವ ಗೋವಳರ ಕಥೆಯು, ಏಕರೂಪದ ಪ್ಯಾಕೆಟುಗಳಲ್ಲಿ ಮಾರಾಟ ಮಾಡುವ ಹಾಲನ್ನು ಒಬ್ಬ ವ್ಯಕ್ತಿಯ ಬದುಕು ಮತ್ತು ಜೀವನೋಪಾಯವಾಗಿ ನೋಡುವಂತೆ ಮಾಡುತ್ತದೆ. ಈ ಹಾಲು ಗ್ರಾಹಕರ ಬಳಿ ತಲುಪುವ ಬಗೆಯನ್ನು ಸಹ ನಾವು ಚೆನ್ನಾಗಿ ಅರಿತುಕೊಳ್ಳುತ್ತೇವೆ.

ಪರಿ ಸಂಪನ್ಮೂಲಗಳ ಬಳಕೆ

ಯಾವುದೇ ವಿಷಯವು ಮಕ್ಕಳಿಗೆ ಸಂವೇದನಾಶೀಲತೆ ಮತ್ತು ಸಹಾನುಭೂತಿಯನ್ನು ಕಲಿಸುವುದಿಲ್ಲ. ಮೌಲ್ಯ ವಿಜ್ಞಾನ (Moral Science) ಅಥವಾ ನೈತಿಕ ಶಿಕ್ಷಣ (Value Education) ತರಗತಿಗಳು ಮೇಲಿನಿಂದ ಹೇರಲ್ಪಟ್ಟ ಪಾಠಗಳ ಜೊತೆಗೆ ಓಬಿರಾಯನ ಕಾಲದ ಕಥೆಗಳನ್ನು ಪುನರಾವರ್ತಿಸುತ್ತವೆ ಹಾಗು ವಿದ್ಯಾರ್ಥಿಗಳು, 'ಕಷ್ಟಕಾಲದಲ್ಲಿ ನೆರವಿಗೆ ಬರುವ ವ್ಯಕ್ತಿಯೇ ನಿಜವಾದ ಸ್ನೇಹಿತನಾಗಿದ್ದಾನೆ' ಎಂಬಂಥ ಕ್ಲೀಷೆಗಳನ್ನು ನೆನಪಿಡಬೇಕೆಂದು ನಿರೀಕ್ಷಿಸಲಾಗುತ್ತದೆ. ಬೆಳೆಯುತ್ತಿರುವ ಮಕ್ಕಳಲ್ಲಿ, ನಾವು ಬದುಕುತ್ತಿರುವ ವಿಶಾಲ ದೇಶದ ಕುರಿತು ಅರಿವು

ಮೂಡಿಸುವುದಕ್ಕಾಗಿ ಹೊರಪ್ರಪಂಚಕ್ಕೆ ಹೆಚ್ಚು ಗೊತ್ತಿರದ ಸಮುದಾಯಗಳು ಮತ್ತು ಉದ್ಯೋಗಗಳ ಬಗ್ಗೆ ಕಲಿಸುವುದು ಹಾಗು ನಮ್ಮ ಆರ್ಥಿಕ ಮತ್ತು ಸಮಾಜಶಾಸ್ತ್ರೀಯ ಚೌಕಟ್ಟಿನಲ್ಲಿರುವ ಸಂಕೀರ್ಣ ಅಂತರ ಸಂಪರ್ಕಗಳನ್ನು ಅವರಿಗೆ ತಿಳಿಸುವುದು ಅತ್ಯಗತ್ಯ. ಅಲ್ಲದೆ, ಮಕ್ಕಳನ್ನು ಹೆಚ್ಚು ಸಂವೇದನಾಶೀಲರನ್ನಾಗಿ ರೂಪಿಸುವುದಕ್ಕೆ ಇತರರ ಬಗೆಗಿನ ಕಲಿಕೆಯೂ ಮುಖ್ಯವಾದದ್ದು. ನಾವು ಶಾಲೆಗಳಿಗೆ ಕಲಿಕಾ ಅನುಭವವನ್ನು ಆಧರಿಸಿದ ಕಾರ್ಯ–ಯೋಜನೆಗಳನ್ನು ವಿನ್ಯಾಸಗೊಳಿಸಲು ಮತ್ತು ಸಾಮಾನ್ಯವಾಗಿ ಬೇರೆಯವರ ಜೊತೆ ತೊಡಗಿಸಿಕೊಳ್ಳದ ಇತರರ ಪ್ರತಿನಿತ್ಯದ ಬದುಕಿನಿಂದ ನೇರವಾಗಿ ಕಲಿತುಕೊಳ್ಳಲು ಬಾಹ್ಯ ಭೇಟಿಯನ್ನು ಉತ್ತೇಜಿಸುತ್ತೇವೆ.

ಜೀವವೈವಿಧ್ಯತೆ ಕುರಿತ ಪ್ರಾಜೆಕ್ಟ್

ಬಹುತೇಕ ಮಕ್ಕಳು ಜೇನನ್ನು ಗುರುತಿಸುತ್ತಾರೆ, ಅದರ ಸ್ವಾದ ಮತ್ತು ಸಿಹಿಯನ್ನು ಅನುಭವಿಸಿರುತ್ತಾರೆ. ಅವರು ಜೇನ್ನೊಣಗಳನ್ನೂ ನೋಡಿರುತ್ತಾರೆ ಮತ್ತು ಅವುಗಳಿಂದ ದೂರವಿರಬೇಕೆಂದು ಅವರಿಗೆ ಹೇಳಲಾಗಿರುತ್ತದೆ. ಚಿತ್ರಗಳು ಮತ್ತು ದೃಶ್ಯತುಣುಕುಗಳೊಂದಿಗೆ ಪರಿಯ (PARI) ಕಥೆಗಳನ್ನು ಬಳಸಿ, ಶಿಕ್ಷಕರು ಜೇನು ಉತ್ಪಾದನೆಯ ಪ್ರಕ್ರಿಯೆಯ ಕುರಿತ ಮಕ್ಕಳ ಜ್ಞಾನವನ್ನು ವೃದ್ಧಿಸಬಹುದು ಮತ್ತು ಜೀವವೈವಿಧ್ಯತೆಯನ್ನು ಕಾಪಾಡಲು ಜೇನ್ನೊಣಗಳಂತಹ ಕೀಟಗಳು ಯಾವ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ತಿಳಿಸಿಕೊಡಬಹುದು. ಇದರ ಜೊತೆಗೆ, ಮಕ್ಕಳು ಸಾಂಪ್ರದಾಯಿಕವಾಗಿ ಜೇನು ಸಂಗ್ರಹಿಸುವವರ ಕೆಲಸ ಮತ್ತು ಈ ಕೆಲಸವನ್ನು ಮಾಡಲು ಬೇಕಾಗುವ ವಿಶಿಷ್ಟ ಕೌಶಲಗಳನ್ನು ಗುರುತಿಸಿ ಗೌರವಿಸಲು ಕಲಿಯುತ್ತಾರೆ. ಜೇನಿನ ಕುರಿತ ನಮ್ಮ ಕಥೆಯಲ್ಲಿ, ಸುಂದರ್‌ಬನ್ ಪ್ರದೇಶದಲ್ಲಿ ಜೇನು ಸಂಗ್ರಹಿಸುವವರು ಹುಲಿಗಳು, ಮೊಸಳೆಗಳು ಮತ್ತು ಡಕಾಯಿತರನ್ನು ಸಹ ಎದುರಿಸಿ ಹೇಗೆ ಜೇನನ್ನು ಹುಡುಕುತ್ತಾರೆ ಎಂಬುದನ್ನು ವರ್ಣಿಸಲಾಗಿದೆ. ಅವರು ಹೇಗೆ ಹೊಗೆ ಹಾಕಿ ಜೇನ್ನೊಣಗಳನ್ನು ಓಡಿಸುತ್ತಾರೆ, ಜೇನು ಸಂಗ್ರಹಿಸುವವರಿಗೆ ಬೇಕಾದ ರಕ್ಷಣೆ ಅಥವಾ ರಕ್ಷಣೆಯ ಕೊರತೆ, ಹೇಗೆ ಜೇನನ್ನು ಸಾಗಿಸುತ್ತಾರೆ ಮುಂತಾದ ವಿಚಾರಗಳನ್ನು ಅವರು ವಿವರಿಸುತ್ತಾರೆ. ಇದರ ನಂತರ 'ಚೇಸಿಂಗ್ ಬೀಸ್ ಫ್ರಮ್ ಸುಂದರ್‌ಬನ್ಸ್ ಟು ಛತ್ತೀಸ್‌ಗಢ್' (Chasing Bees from Sundarbans to Chhattisgarh) ಎಂಬ ಸಚಿತ್ರ ಕಥೆಯನ್ನು ಪ್ರಸ್ತುತಪಡಿಸಬಹುದು. ಇದರಲ್ಲಿ ಜೇನನ್ನು ಪಡೆಯುವ ಪ್ರಕ್ರಿಯೆಯು ಅವರನ್ನು ಹೇಗೆ ಬೇರೆ ರಾಜ್ಯಗಳಲ್ಲಿ ಅವಕಾಶ ಗಿಟ್ಟಿಸುವಂತೆ ಮಾಡುತ್ತದೆ ಎನ್ನುವುದನ್ನು ತೋರಿಸುತ್ತದೆ. ಅಥವಾ 'ದ ಹನಿ ಹಂಟರ್ಸ್ ಆಫ್ ದ ಹಿಲ್ಸ್' (The Honey Hunters of the Hills) ಎಂಬ ಪಾಠವನ್ನು ಹೇಳಿಕೊಡಬಹುದು. ಈ ಪಾಠದಲ್ಲಿ ನೀಲಗಿರಿಯ ತೋಡಾ ಆದಿವಾಸಿಗಳು ಮರದ ಪೊಟರೆಗಳಿಂದ ಹೇಗೆ ಜೇನನ್ನು ಸಂಗ್ರಹಿಸುತ್ತಾರೆ ಎಂಬುದನ್ನು ವಿವರಿಸಲಾಗಿದೆ. ಜೊತೆಗೆ 'ಬ್ಯಾಟಲ್ ಆಫ್ ದ ಬಗ್ಸ್: ಆನ್ ವಿಂಗ್ಸ್ ಆಫ್ ಕ್ಲೈಮೇಟ್ ಚೇಂಜ್' (Battle of the Bugs: On Wings of Climate Change) ಎಂಬ ಕಿರುಚಿತ್ರವು ಪರಾಗಸ್ಪರ್ಶ ಮತ್ತು ನಮ್ಮ ಅರಣ್ಯಸಂಪತ್ತಿನ ಸಂರಕ್ಷಣೆಗೆ ಜೇನ್ನೊಣಗಳ ಪ್ರಾಮುಖ್ಯತೆಯನ್ನು ವಿವರಿಸುತ್ತದೆ.

ಕೊನೆಯದಾಗಿ, ಜೇನು ಮತ್ತು ಜೇನ್ನೊಣಗಳ ಕುರಿತು ಈ ತುಣುಕುಗಳನ್ನು ಬಳಸಿ ಚಟುವಟಿಕೆಯಲ್ಲಿ ತೊಡಗಿದಾಗ, ನಾವು ಒಂದಷ್ಟು ಪ್ರಮಾಣದಲ್ಲಿ ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಜೀವಶಾಸ್ತ್ರ (ಕೀಟಗಳು, ಮರಗಳು, ಪರಾಗಸ್ಪರ್ಶ, ಮಕರಂದ ಮತ್ತು ಫಲಸಕ್ಕರೆ (Fructose), ಭೂಗೋಳಶಾಸ್ತ್ರ (ನದಿಮುಖಜ ಭೂಮಿ, ಕಾಡುಗಳು ಮತ್ತು ಗುಡ್ಡಗಾಡು), ಜೀವವೈವಿಧ್ಯತೆ ಮತ್ತು ಪ್ರಭೇದಗಳ ಅಂತರ–ಅವಲಂಬನೆ, ಜೊತೆಗೆ ಸುರಕ್ಷತೆ ಮತ್ತು ಹೊರತೆಗೆಯುವಿಕೆ (Safeguard and extraction) ಮುಂತಾದ ಹೊಸ ಶಬ್ದಗಳ ಬಳಕೆಯ ಮೂಲಕ ಹೊಸ ಶಬ್ದ ಮತ್ತು ಪರಿಕಲ್ಪನೆಗಳ ಮೂಲಕ ಶಬ್ದಭಂಡಾರದ ವಿಸ್ತರಣೆ – ಹೀಗೆ ಅನೇಕ ಉದ್ದೇಶಗಳನ್ನು ಒಂದೇ ಕಾರ್ಯದಲ್ಲಿ ಈಡೇರಿಸುತ್ತೇವೆ. ಇದಕ್ಕೂ ಹೆಚ್ಚಿನದಾಗಿ ಜೇನಿಗೆ ಒಂದು ಇತಿಹಾಸ ಮತ್ತು ಪ್ರಕ್ರಿಯೆ ಇದೆ ಹಾಗು ಜೇನ್ನೊಣಗಳಿಗೆ ನಮ್ಮ ಬದುಕಿನಲ್ಲಿ ಪ್ರಮುಖ ಸ್ಥಾನವಿದೆ. ಇದರ ಜೊತೆಗೆ ನಾವು ವಿಶಿಷ್ಟ ಸಮುದಾಯಗಳು ಮತ್ತು ಅವು ಹೇಗೆ ಕೀಟ ಸಾಮ್ರಾಜ್ಯದೊಂದಿಗೆ ಸಂಬಂಧವನ್ನು ಹೊಂದಿವೆ ಎಂಬುದನ್ನು ಕಲಿಯುತ್ತೇವೆ.ಶಿಕ್ಷಕರು ಈಗ ಕೀಟಗಳ ಕುರಿತು ಜಾಗೃತಿ ಮೂಡಿಸಲು ಶಾಲೆಯಲ್ಲೇ ಸಣ್ಣದಾದ ಕಾರ್ಯಯೋಜನೆಯನ್ನು ಮಾಡಬಹುದು. ವಿದ್ಯಾರ್ಥಿಗಳ ಗುಂಪಿಗೆ ಒಂದು ಮರ ಅಥವಾ ಪೊದೆಯನ್ನು ಗುರುತಿಸಿ, ಅವುಗಳಲ್ಲಿ ಅಥವಾ ಅವುಗಳ ಸುತ್ತ ಇರುವ ಕೀಟಗಳ ಬದುಕನ್ನು ಗಮನಿಸಲು ಅಥವಾ ಚಿತ್ರಿಸಲು ಒಂದು ಗಂಟೆಯ ಕಾಲಾವಕಾಶವನ್ನು ನೀಡಬಹುದು. ತರಗತಿಯಲ್ಲಿ, ಈ ಜೀವಿಗಳು ಪರಸ್ಪರ ಹೇಗೆ ಅಂತರ್‌ಸಂಬಂಧವನ್ನು ಹೊಂದಿವೆ, ಗಿಡದ ಆರೋಗ್ಯ ಮುಂತಾದವುಗಳನ್ನು ಶಿಕ್ಷಕರು ವಿವರಿಸಬಹುದು ಹಾಗು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇದನ್ನೆಲ್ಲ ಈ ಭೂಮಿಯ ಆರೋಗ್ಯಕ್ಕೆ ಜೋಡಿಸಬಹುದು.

ಲಿಂಗತ್ವದ ಕುರಿತ ಪ್ರಾಜೆಕ್ಟ್

ಎಳೆಯ ವಿದ್ಯಾರ್ಥಿಗಳ ಜೊತೆಗೆ ರೈತ ಮಹಿಳೆಯರು ಎಂಬ ವಿಷಯದಲ್ಲಿ ನಾವು ಅತ್ಯಂತ ಯಶಸ್ವಿ ಕಾರ್ಯಕ್ರಮವೊಂದನ್ನು ನಡೆಸಿದ್ದು, ಈ ಪದವನ್ನು ಸ್ಪಷ್ಟವಾಗಿ ಬಳಸದೆಯೇ ಲಿಂಗ ಸಮಾನತೆಯ ಕುರಿತು ಮಾತನಾಡಲು ಈ ವಿಚಾರವು ಸೂಕ್ತವಾಗಿತ್ತು.

ತಮಿಳುನಾಡಿನ ಓರ್ವ ರೈತ ಮಹಿಳೆ ಮತ್ತು ಒಂಟಿ ತಾಯಿಯಾಗಿರುವ ಚಂದ್ರಾ ಅವರ ಕಥೆಯೊಂದಿಗೆ ಇದು ಪ್ರಾರಂಭವಾಗುತ್ತದೆ. ಈಕೆ ಚಂದ್ರನ ಮಬ್ಬು ಬೆಳಕಲ್ಲಿ ಹೂಗಳನ್ನು ಕಿತ್ತು ಮುಂಜಾನೆ ಮಾರುಕಟ್ಟೆಗೆ ತಲುಪುತ್ತಾಳೆ. ಈಕೆ ತನ್ನ ತೋಟ ಮತ್ತು ಮನೆಯಲ್ಲಿ ಹಲವಾರು ಕೆಲಸಗಳನ್ನು ಮಾಡುತ್ತಾಳಾದರೂ, ಈ ಕಥೆಗೆ 'ಸ್ಮಾಲ್ ಫಾರ್ಮರ್, ಬಿಗ್ ಹಾರ್ಟ್, ಮಿರಾಕಲ್ ಬೈಕ್!' ಎಂದು ಹೆಸರಿಸಲಾಗಿದೆ ಎಂಬುದನ್ನು ಓದುಗನು ಕಂಡು–ಹಿಡಿಯುತ್ತಾನೆ. ಇದರ ನಂತರ 'ಫೂಟ್ ಪ್ರಿಂಟ್ಸ್ ಇನ್ ದ ಸ್ಯಾಂಡ್ಸ್ ಆಫ್ ಎ ಮೈನ್' ಎಂಬ ಕಥೆಯನ್ನು ಪ್ರಸ್ತುತಪಡಿಸಲಾಗುತ್ತದೆ. ಇದು ಉತ್ತರಪ್ರದೇಶದ ಬಂಡಾ ಜಿಲ್ಲೆಯ ಮಹಿಳಾ ರೈತರ ಒಂದು ಗುಂಪಿನ ಶಕ್ತಿಶಾಲಿ ಚಿತ್ರಣವನ್ನು ಪ್ರಸ್ತುತಪಡಿಸುತ್ತದೆ. ಕೃಷಿಯ ಹೆಚ್ಚಿನ ಕೆಲಸವನ್ನು ಮಾಡುವ ಮಹಿಳೆಯರ ಪಾಲಿಗೆ ಹರಿಯುವ ನದಿಯು (ನದಿಗೆ ಅಣೆಕಟ್ಟೆ ನಿರ್ಮಿಸುವ ಬದಲು) ಎಷ್ಟು ಪ್ರಮುಖವಾದುದು ಎಂಬುದನ್ನು ಈ ಕಥೆಯಿಂದ ವಿದ್ಯಾರ್ಥಿಗಳು ಅರಿತುಕೊಳ್ಳುತ್ತಾರೆ. ಅಂತಿಮವಾಗಿ ಅವರು ಸ್ಥಳೀಯ ಬೀಜಗಳ ಸಂರಕ್ಷಣೆಗೆ ಹೆಸರುವಾಸಿಯಾಗಿರುವ, ತನ್ನ ಪ್ರದೇಶದಲ್ಲಿ ಜೀವವೈವಿಧ್ಯತೆಯನ್ನು ಕಾಪಾಡುವುದಕ್ಕಾಗಿ ನೀಡಿದ ಕೊಡುಗೆಗಾಗಿ ಪದ್ಮಶ್ರೀ ಪುರಸ್ಕಾರವನ್ನು ಪಡೆದ, ಒಡಿಶಾದ ಪತ್ರಪುರ ಜಿಲ್ಲೆಯ ಕಮಲಾ ಪೂಜಾರಿ ಅವರನ್ನು ಭೇಟಿಯಾಗುತ್ತಾರೆ.

ವಿದ್ಯಾರ್ಥಿಗಳಿಗೆ, ಮನೆಗೆಲಸವಾಗಿ, ಅವರ ತಾಯಂದಿರು / ಅಜ್ಜಿಯಂದಿರು ಬೆಳಗ್ಗೆಯಿಂದ ಸಂಜೆಯ ತನಕ ಏನೆಲ್ಲ ಕೆಲಸ ಮಾಡುತ್ತಾರೆ (ಊಟ ಮಾಡಲು, ಸ್ನಾನ ಮಾಡಲು ಮೊದಲಾದ ಸೂಚನೆ ನೀಡುವುದನ್ನು ಸಹ ಸೇರಿಸಿಕೊಂಡು!) ಎಂದು ಪಟ್ಟಿ ಮಾಡಲು ತಿಳಿಸಲಾಗುತ್ತದೆ. ಇದು ತರಗತಿಯಲ್ಲಿ ಸಾಕಷ್ಟು ಹಾಸ್ಯಕ್ಕೆ ಕಾರಣವಾಯಿತು. ಆದರೆ ಮಹಿಳೆಯರು ಮಾಡುವ ಕೆಲಸ (ಉದಾಹರಣೆಗೆ ಮನೆಯ ಬಳಕೆಗಾಗಿ ನೀರನ್ನು ತುಂಬಿಡುವುದು) ಮತ್ತು ಪ್ರತಿಯೊಂದು ಕೆಲಸಕ್ಕೂ ಅವರು ತೆಗೆದುಕೊಳ್ಳುವ ಸಮಯವನ್ನು ಪಟ್ಟಿ ಮಾಡಿದಾಗ ಇವರ ಪಾತ್ರ ನಿಜಕ್ಕೂ ಮುನ್ನೆಲೆಗೆ ಬಂದಿತು. ಈ ಕಥೆಯ ಹಿನ್ನೆಲೆಯಲ್ಲಿ, ಮಹಿಳೆಯರ ಕೊಡುಗೆಗಳು ಮತ್ತು ನಮ್ಮ ಆಹಾರವನ್ನು ಬೆಳೆಸುವಲ್ಲಿ, ಪರಿಸರ ವ್ಯವಸ್ಥೆಯನ್ನು ಕಾಪಾಡುವಲ್ಲಿ ಅವರು ವಹಿಸುವ ನಿರ್ಣಾಯಕ ಪಾತ್ರವನ್ನು ವಿದ್ಯಾರ್ಥಿಗಳು ಅರಿತುಕೊಳ್ಳುವುದು ಸಾಧ್ಯವಾಯಿತು.

ವಲಸೆಯ ಕುರಿತ ಪ್ರಾಜೆಕ್ಟ್

ನಾವು ವಲಸೆ ಎಂಬ ಶಬ್ದವನ್ನು ವಿವರಿಸುವ ಮೂಲಕ ಮತ್ತು ವಿವಿಧ ವಲಸೆಗಳ – ಋತು ಆಧಾರಿತ, ವೃತ್ತೀಯ, ಶಾಶ್ವತ ಇತ್ಯಾದಿ– ಕುರಿತ ಪರಿ (PARI) ಕಥೆಗಳ ಚಿತ್ರಗಳನ್ನು ಮಕ್ಕಳಿಗೆ ತೋರಿಸುವ ಮೂಲಕ ಈ ಕಾರ್ಯಯೋಜನೆಯನ್ನು ಪ್ರಾರಂಭಿಸುತ್ತೇವೆ. ನಂತರ ತಮ್ಮ ಸುತ್ತ ಇರುವ ವಲಸಿಗರು, ಅಡುಗೆಯವರು, ವಾಹನ ಚಾಲಕರು, ಭದ್ರತಾ ಸಿಬ್ಬಂದಿ ಮುಂತಾದ ವ್ಯಕ್ತಿಗಳ ಜೊತೆ ಮಾತನಾಡಲು ನಾವು ಅವರನ್ನು ಕೇಳುತ್ತೇವೆ. ಆರಂಭದಲ್ಲಿ, ವಿದ್ಯಾರ್ಥಿಗಳಿಗೆ ಮಾತುಕತೆಯನ್ನು ಪ್ರಾರಂಭಿಸಲು ಇರಿಸುಮುರು–ಸಾದರೂ, ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ತಮ್ಮ ಪ್ರಯತ್ನವನ್ನು ಮುಂದುವರಿಸಬೇಕು ಎಂದು ನಾವು ಒತ್ತಾಯಿಸುತ್ತೇವೆ:

1. ಅವರು ಯಾವ ಗ್ರಾಮ, ಜಿಲ್ಲೆ ಮತ್ತು ರಾಜ್ಯದಿಂದ ಬಂದಿದ್ದಾರೆ?
2. ಅವರು ಹೇಗೆ ಪ್ರಯಾಣಿಸಿದ್ದಾರೆ?
3. ಅವರು ಶಾಲೆಗೆ ಹೋಗಿದ್ದಾರೆಯೇ?
4. ಅವರು ಯಾಕೆ ವಲಸೆ ಬಂದಿದ್ದಾರೆ?
5. ಅವರಿಗೆ ಯಾವುದು ಹೆಚ್ಚು ಕಾಡುತ್ತಿರುತ್ತದೆ?

ತಮ್ಮ ಸುತ್ತ ಇರುವ ಜನರ (ನಿರೀಕ್ಷೆಯಂತೆ ಅವರು ವಲಸಿಗರು) ಕುರಿತು ನೇರವಾಗಿ ಮಾಹಿತಿಯನ್ನು ಕಲೆ ಹಾಕಿ ಒಂದು ವಾರದ ನಂತರ ಮರಳಿದಾಗ, ಬಹುತೇಕ ಮಕ್ಕಳು ವಲಸಿಗರ ಬಗ್ಗೆ ತಿಳಿದುಕೊಂಡರಲ್ಲದೆ, ವಲಸಿಗರು ಎಂದರೆ ಮನೆ ಇಲ್ಲದವರು, ಆಲಸಿಗಳು, ಅನಕ್ಷರಸ್ಥರು ಮುಂತಾದ ಸಿದ್ಧಮಾದರಿಗಳನ್ನು ತಮ್ಮ ಮನಸ್ಸಿನಿಂದ ತೊಡೆದು ಹಾಕಲು ಅವರು ಸಿದ್ಧರಾಗಿರುತ್ತಾರೆ.

ಮುಖ್ಯವಾಹಿನಿಯ ಗಮನಕ್ಕೆ ಬಾರದೆ ಹೋಗುವ ವ್ಯಕ್ತಿಗಳ ಜೊತೆ ಮಾತನಾಡಿ, ಯಾಕೆ ಇವರು ತಮ್ಮ ಮನೆ ಮತ್ತು ಪ್ರೀತಿಪಾತ್ರರನ್ನು ಬಿಟ್ಟು ಬರುತ್ತಾರೆ, ಭಾರತದ ಯಾವೆಲ್ಲ ಪ್ರದೇಶಗಳಿಂದ ಜನರು ವಲಸೆ ಹೋಗುತ್ತಾರೆ, ಅವರೆಷ್ಟು ಬಾರಿ ವಾಪಸ್ ತೆರಳುತ್ತಾರೆ, ಶಾಲೆಯನ್ನು ತೊರೆದ ಬಗ್ಗೆ ಅವರ ಭಾವನೆಗಳೇನು, ಎಳವೆಯಲ್ಲೇ ಕೆಲಸ ಮಾಡಲು ಪ್ರಾರಂಭಿಸಿದ ಕುರಿತು ಏನು ಅನ್ನಿಸುತ್ತದೆ, ಅವರು ಊರು ಬಿಡಲು ಕಾರಣವೇನು ಮುಂತಾದ ವಿಚಾರಗಳಲ್ಲಿ ತೊಡಗಿಸಿಕೊಂಡು ಅರ್ಥೈಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳಿಂದ ಗಾರ್ಡ್, ಧೋಬಿ ಮುಂತಾದ ವೃತ್ತಿ ಆಧಾರಿತ ಶೀರ್ಷಿಕೆಗಳು ಹಾಗು ದೀದಿ ಮತ್ತು ಭಯ್ಯಾ ಮುಂತಾದ ಸಾಮಾನ್ಯ ಪದಗಳಿಂದ ಕರೆಸಿಕೊಳ್ಳುತ್ತಿದ್ದ ಪ್ರತಿಯೊಂದು ವ್ಯಕ್ತಿಯೂ ಒಂದು ಅಸ್ಮಿತೆಯನ್ನು ಹೊಂದಿರುತ್ತಾರೆ. ಸಾಲ, ಬಾಲಕಾರ್ಮಿಕ, ಹಸಿವು, ಒಂಟಿತನ, ಸಾಕಷ್ಟು ಸಮಯದಿಂದ ಮನೆ ಮತ್ತು ಕುಟುಂಬದಿಂದ ದೂರವಿರುವ ಕಾರಣ ಕಾಡುವ ಯಾತನೆ, ಮಕ್ಕಳು ಬೆಳೆಯುತ್ತಿರುವುದನ್ನು ನೋಡಲು ಸಾಧ್ಯವಾಗದೆ ಇರುವುದು ಅಥವಾ ವೃದ್ಧಾಪ್ಯಕ್ಕೆ ತಲುಪಿರುವ ತಮ್ಮ ಪೋಷಕರ ಆರೈಕೆ ಮಾಡಲು ಸಾಧ್ಯವಾಗದೆ ಇರುವುದು ಮುಂತಾದ ವಿಚಾರಗಳನ್ನು ಕೂಡ ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಲು ಕಲಿಯುತ್ತಾರೆ ಹಾಗು ಅವರ ಕುರಿತು ಸಹಾನುಭೂತಿ ವ್ಯಕ್ತಪಡಿಸುತ್ತಾರೆ.

ಮಕ್ಕಳ ಕೆಲವು ಪ್ರತಿಕ್ರಿಯೆಗಳು ಹೀಗಿವೆ:

- ‘ಬರ’ ಅಂದರೆ ಏನು ಎಂಬ ಪದವನ್ನು ನಾನು ಕಲಿತೆ.
- ಆ ಚಾಲಕನ ತಂದೆ ಸಾಯುವ ತನಕ ಆತನ ಬದುಕು ನನ್ನಂತೆಯೇ ಇತ್ತು ಹಾಗು ನಂತರ ಆತ ಶಾಲೆಯನ್ನು ಬಿಟ್ಟು ಕೆಲಸಕ್ಕೆ ಸೇರಿಕೊಳ್ಳಬೇಕಾಯಿತು.
- ನಮ್ಮ ವಯಸ್ಸಿನ ಮಕ್ಕಳು ಶಾಲೆಗೆ ಹೋಗುವ ಬದಲಿಗೆ ಹೊಲಗಳಲ್ಲಿ ಮತ್ತು ಕಟ್ಟಡ ನಿರ್ಮಾಣ ತಾಣಗಳಲ್ಲಿ ಕೆಲಸ ಮಾಡುತ್ತಿದ್ದಾರೆ.
- ರೈತರಿಗೆ ಕೆಲವೊಮ್ಮೆ ಆಹಾರ ದೊರೆಯದಿದ್ದರೂ ನಮಗಾಗಿ ಅವರು ಆಹಾರವನ್ನು ಬೆಳೆಸುತ್ತಿದ್ದಾರೆ.

ಬೇಸಾಯ ಮತ್ತು ಆಹಾರದ ಕುರಿತ ಕಾರ್ಯಯೋಜನೆ

ಕೃಷಿ, ಬೇಸಾಯ ಮತ್ತು ಆಹಾರದ ಕುರಿತ ಒಂದು ಕಾರ್ಯ–ಯೋಜನೆಯು, ಹೇಗೆ ಅವರ ತಟ್ಟೆಗೆ ಆಹಾರ ಬಂದೊದಗುತ್ತದೆ ಮತ್ತು ಅವರ ಚಾಕೋಲೇಟ್‌ಗೆ ಬೇಕಾಗುವ ಸಕ್ಕರೆ ತಯಾರಿಸಲು ಇರುವ ಪ್ರಕ್ರಿಯೆಗಳೇನು ಎಂಬುದರ ಮೇಲೆ ಬೆಳಕು ಹರಿಸುತ್ತದೆ. ನಾವು ಮಕ್ಕಳಿಗೆ ಭತ್ತ ಮತ್ತು ಕಬ್ಬು, ಕಲ್ಲಂಗಡಿ ಮತ್ತು ಟೊಮ್ಯಾಟೊ ಮುಂತಾದವುಗಳ ಕೃಷಿಯ ಕುರಿತು ಕೆಲವು ಕಥೆಗಳನ್ನು ಹೇಳುತ್ತೇವೆ.

ನಂತರ ಓರ್ವ ಹಿರಿಯ ವ್ಯಕ್ತಿಯ ಜೊತೆ ತರಕಾರಿ ಮಾರುಕಟ್ಟೆಗೆ ಹೋಗಿ ಯಾರಾದರೂ ತರಕಾರಿ ಮಾರಾಟಗಾರನ ಬಳಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಲು ಹೇಳುತ್ತೇವೆ:

1. ನೀವು ಎಲ್ಲಿಂದ ಬಂದಿದ್ದೀರಿ?
2. ಈ ತರಕಾರಿಗಳನ್ನು ನೀವೇ ಬೆಳೆಸುತ್ತೀರಾ? ಅಥವಾ ನೀವು ಇದನ್ನು ಎಲ್ಲಿಂದ ಖರೀದಿಸುತ್ತೀರಿ?
3. ನೀವು ಈ ತರಕಾರಿಗಳನ್ನು ಹೇಗೆ ಸಾಗಿಸುತ್ತೀರಿ ಮತ್ತು ಮಾರಾಟವಾಗದೆ ಉಳಿದ ತರಕಾರಿಗಳನ್ನು ಏನು ಮಾಡಲಾಗುತ್ತದೆ?

ಕೆಲವೊಮ್ಮೆ, ತರಕಾರಿ ವ್ಯಾಪಾರಿಯು ಮಾರಾಟ ಪ್ರಕ್ರಿಯೆಯನ್ನು ಮುಗಿಸುವ ತನಕ ಇವರು ಕಾಯಬೇಕಾಗುತ್ತದೆ. ಇದರಿಂದ, ಅವರು ಹೇಗೆ ಕೆಲಸ ಮಾಡುತ್ತಾರೆ ಎನ್ನುವುದನ್ನು ನೋಡಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ.

ವಿದ್ಯಾರ್ಥಿಗಳು ನೀಡಿರುವ ಕೆಲವು ಪ್ರತಿಕ್ರಿಯೆಗಳು ಹೀಗಿವೆ:

- ನಾವು ಈ ತಕ್ಕಡಿಯನ್ನು ಹಿಂದೆಂದೂ ಮುಟ್ಟಿನೋಡಿಲ್ಲ; ಇದು ತುಂಬಾ ಭಾರವಾಗಿದೆ!
- ಇಲ್ಲಿಗೆ ಬಂದು ತರಕಾರಿ ಮಾರಾಟ ಮಾಡಬೇಕಾದರೆ ತಾನು ಬಸ್‌ನಲ್ಲಿ ಎರಡು ಗಂಟೆ ಪ್ರಯಾಣಿಸಬೇಕಾಗುತ್ತದೆಂದು ಆಕೆ (ತರಕಾರಿ ಮಾರುವ ಮಹಿಳೆ)ಹೇಳಿದರು.

ಒಟ್ಟಾರೆ ಹೇಳುವುದಾದರೆ, ಪರಿ (PARI) ಬೋಧನಾ ವಿಧಾನವು ಮಕ್ಕಳಿಗೆ ಮಾಹಿತಿ ನೀಡಿ ಅವರಲ್ಲಿ ಸಂವೇದನಾಶೀಲತೆಯನ್ನು ತುಂಬುವುದಕ್ಕಾಗಿ, ಪ್ರತಿನಿತ್ಯದ ಬದುಕಿನ ಕುರಿತ ಬರಹ, ಚಿತ್ರ, ಚಲನಚಿತ್ರ – ಹೀಗೆ ವಿವಿಧ ರೂಪಗಳನ್ನು ಬಳಸಿ ಕಥೆ ಹೇಳುತ್ತದೆ. ಇದು ಪೌರತ್ವದ ಕುರಿತ ವಿಸ್ತೃತ ನೋಟವನ್ನು ಪಡೆಯಲು ಅವರಿಗೆ ನೆರವಾಗುತ್ತದೆ. ಭಾಷಾ ವೈವಿಧ್ಯತೆ, ಜೀವನೋಪಾಯ, ಸಮುದಾಯಗಳು ಮತ್ತು ಸಂಸ್ಕೃತಿಗಳ ಕುರಿತ ಕಳಕಳಿಯು, ಸಿದ್ಧಮಾದರಿಗಳನ್ನು ತಿರಸ್ಕರಿಸಲು ಮತ್ತು ತಮ್ಮ ಸಹ ನಾಗರಿಕರಲ್ಲಿ ಇರುವ ಭಿನ್ನತೆಗಳನ್ನು ಸ್ವೀಕರಿಸಲು ವಿದ್ಯಾರ್ಥಿಗಳಿಗೆ ಶಕ್ತಿ ತುಂಬುತ್ತದೆ.



ಪ್ರೀತಿ ಡೇವಿಡ್ ಅವರು ಪರಿ (People's Archive of Rural India -PARI) ಗಾಗಿ ವರದಿ ಮಾಡುತ್ತಾರೆ ಹಾಗು ಶಿಕ್ಷಣ, ಆರೋಗ್ಯ, ಮಹಿಳೆಯರು, ಕರಕುಶಲ ವಸ್ತುಗಳು ಮತ್ತು ಜೀವನೋಪಾಯದ ಕುರಿತು ಬರೆಯುತ್ತಾರೆ. 'ಪರಿ ಎಜುಕೇಶನ್'ನ ಸಂಪಾದಕಿಯಾಗಿ ಪ್ರೀತಿ ಅವರು, ಗ್ರಾಮೀಣ ವಿಷಯಗಳನ್ನು ತರಗತಿ ಕೊಠಡಿಯೊಳಗೆ ಹಾಗು ಪಠ್ಯಕ್ರಮದಲ್ಲಿ ತರುವುದಕ್ಕಾಗಿ ಶಾಲೆಗಳು ಮತ್ತು ಕಾಲೇಜುಗಳ ಜೊತೆ ಕೆಲಸ ಮಾಡುತ್ತಾರೆ. ಅವರು ಬಿ.ಎಡ್ ಜೊತೆಗೆ ಅರ್ಥಶಾಸ್ತ್ರದಲ್ಲಿ ಪದವಿ ಪಡೆದಿದ್ದಾರೆ. ಅವರು ದಿ ಎಕಾನಮಿಕ್ಸ್ ಟೈಮ್ಸ್, ಸಿ.ಎನ್.ಬಿ.ಸಿ ಮತ್ತು ಎ.ಬಿ.ಎನ್.ಐ (ಟಿ.ವಿ) ಸಂಸ್ಥೆಗಳಲ್ಲೂ ಕಾರ್ಯನಿರ್ವಹಿಸಿದ್ದಾರೆ. ಇಂಡಿಯಾ ಬ್ಯುಸಿನೆಸ್ ರಿಪೋರ್ಟ್ (ಬಿ.ಬಿ.ಸಿ ವರ್ಲ್ಡ್)ನಲ್ಲಿ ವರದಿಗಾರ್ತಿಯಾಗಿದ್ದರು. ಸದ್ಯ ಕ್ರಾಫ್ಟ್ಸ್ ಕೌನ್ಸಿಲ್ ಆಫ್ ಇಂಡಿಯಾದ 'ಸ್ಟೋನ್ ಕ್ರಾಫ್ಟ್ಸ್ ಆಫ್ ಇಂಡಿಯಾ'ದ ಸಂಪಾದಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರೀತಿ ಅವರು ಆಂಧ್ರಪ್ರದೇಶದ ರಿಶಿ ವ್ಯಾಲಿ ಸ್ಕೂಲ್ ಮತ್ತು ಬೆಂಗಳೂರಿನ ಸೇಂಟ್ ಜೋಸೆಫ್ಸ್ ಬಾಯ್ಸ್ ಹೈಸ್ಕೂಲ್‌ನಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅವರು ವಿಶ್ವವಿದ್ಯಾಲಯಗಳಲ್ಲಿ ಅಭಿವೃದ್ಧಿ ಪತ್ರಿಕೋದ್ಯಮದ ಕುರಿತು ಅತಿಥಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ ಅವರು 'ಕಮಿಂಗ್ ಹೋಂ' (ಕರಡಿ ಟೇಲ್ಸ್)ನ ಲೇಖಕಿಯಾಗಿದ್ದಾರೆ. ಅವರನ್ನು priti@ruralindiaonline.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೋನ್ಸಾ** । ಪರಿಶೀಲನೆ: **ಚಂದ್ರಶೇಖರ ಮಂಡೆಕೋಲು**